

ವರ್ಣವಿಲಾಸ: ಶರತ್ಕಾಲದಲ್ಲಿ ಹಲವು ಬಣ್ಣಗಳಿಂದ ಕಂಗೊಳಿಸುತ್ತಿರುವ ಉದ್ಯಾನ

ವಿಶಾಲವಾದ ಉದ್ಯಾನವನ. ನಗರದ ನಡುವೆಯೇ ಇರುವ ಇದೊಂದೇ ಪಾರ್ಕ್ 2500 ಎಕರೆಗಳಷ್ಟು ದೊಡ್ಡದು!

ರಿಚ್ಮಂಡ್ ಪಾರ್ಕ್‌ನಲ್ಲಿ ಸುಮಾರು 600 ಜಿಂಕೆಗಳಿವೆ. ಇದನ್ನು ಸಂರಕ್ಷಿತ ಪಾರ್ಕನ್ನಾಗಿ ಘೋಷಿಸಿರುವುದರಿಂದ ಜಿಂಕೆಗಳಿಗೆ ಪೂರ್ತಿ ರಕ್ಷಣೆಯಿದೆ. ಇದು ರಾಷ್ಟ್ರಮಟ್ಟದ ಪ್ರಾಕೃತಿಕ ಧಾಮವೆಂದು ಕರೆಸಿಕೊಂಡಿದೆ. ಯೂರೋಪಿನ ಲೆಕ್ಕದಲ್ಲೂ ಈ ವನ ವಿಶೇಷ ಸಂರಕ್ಷಿತ ನಿಸರ್ಗಧಾಮವೆಂದು ಹೆಸರು ಪಡೆದಿದೆ.

ಇಂಗ್ಲೆಂಡಿನ ಪ್ರತಿ ಚಾರಿತ್ರಿಕ ಜಾಗಕ್ಕೂ ಒಂದಲ್ಲ ಒಂದು ರೀತಿಯ ಕಪ್ಪು ನೆರಳಿದೆ. ಮೆಚ್ಚತಕ್ಕ ಮಾತೆಂದರೆ ಅದನ್ನು ಬಹು ಖಚಿತವಾಗಿ ದಾಖಲಾತಿಗಳ ಮೂಲಕ ರಕ್ಷಿಸಿ ಇಟ್ಟು ವಿನಯದಿಂದ ಅದನ್ನು ಒಪ್ಪಿಕೊಳ್ಳುವ ಇಂಗ್ಲಿಷರು ತಮ್ಮ ಕರಾಳಚರಿತ್ರೆಯನ್ನು ನೇರವಾಗಿ ಹೇಳಿಕೊಳ್ಳುವುದು. ಇದೇ ಕಾರಣಕ್ಕೆ ತಮ್ಮ ಲೋಲುಪ ರಾಜ–ರಾಣಿಯರ ಆಡಳಿತ ಕಾಲದಿಂದ ಪಾರಾಗಿ ಇಂದಿನ ಮುಕ್ತ ಇಂಗ್ಲೆಂಡಿನ ಜಗತ್ತನ್ನು ತಲುಪಿದ ಪರಿಗಾಗಿ ಇವರು ಪ್ರಶಂಸೆಯನ್ನೂ ಗಳಿಸಿಕೊಳ್ಳುತ್ತಾರೆ.

ರಿಚ್ಮಂಡ್ ಪಾರ್ಕ್ ಸುಂದರವಾದ ಹಸಿರು ಉದ್ಯಾನವನ. ಅದು ಹೂಗಳು, ತೊರೆಗಳು, ಕಾಲುವೆಗಳು, ಕೊಳಗಳು, ಬೃಹದಾಕಾರದ ಓಕ್ ಮರಗಳು, ಜಿಂಕೆಗಳಿಂದ ತುಂಬಿದೆ. ಅಲ್ಲಿ ಚರಿತ್ರೆ, ಆಧುನಿಕ ಸವಲತ್ತುಗಳು, ಚಟುವಟಿಕೆಗಳು ಎಲ್ಲವೂ ಇವೆ. ಆದರೆ ಚಾರಿತ್ರಿಕವಾಗಿ ಈ ಜಾಗ ಯಾವತ್ತೂ ಹೀಗೆಯೇ ಇರಲಿಲ್ಲ.

ರಿಚ್ಮಂಡ್ ಪಾರ್ಕ್‌ನ ಮೊದಲ ಹೆಸರು 'ಮೇನರ್ ಆಫ್ ಶೀನ್' ಎಂದಾಗಿತ್ತು. 1272–1307ರಲ್ಲಿ ಲಂಡನ್‌ನ ದೊರೆಯಾದ ಎಡ್ವರ್ಡ್‌ನಿಗೆ ಸೇರಿದ ಜಾಗವಾಗಿತ್ತು. ಆ ಕಾಲಕ್ಕೆ ಲಂಡನ್‌ನ ಅರಮನೆಯಿಂದ ಈ ಜಾಗ ದೂರದಲ್ಲಿತ್ತಂತೆ. 1625ರಲ್ಲಿ ಚಾರ್ಲ್ಸ್ ಎಂಬ ದೊರೆ ಪ್ಲೇಗ್ ರೋಗದಿಂದ ದೂರಾಗಲು ಲಂಡನ್ ನಗರವನ್ನು ತೊರೆದು ಹತ್ತಿರವೇ ಇದ್ದ ರಿಚ್ಮಂಡ್ ಅರಮನೆಗೆ ವಾಸಕ್ಕೆ ಬಂದನಂತೆ. ಈಗ ರಿಚ್ಮಂಡ್ ಎನ್ನುವುದು ಲಂಡನ್ನಿನ ಒಂದು ಭಾಗವಾಗುವಷ್ಟು ಲಂಡನ್ ಮಹಾನಗರಿ ಬೆಳೆದಿದೆ. ರಿಚ್ಮಂಡ್ ಅರಮನೆಗೆ ಹೊಂದಿಕೊಂಡಂತೆ ಬೃಹದಾಕಾರದ ಮರಗಳಿಂದ, ಬಯಲುಗಳಿಂದ ತುಂಬಿದ್ದ 'ಮೇನರ್ ಆಫ್ ಶೀನ್' ಆ ಕಾಲದಲ್ಲಿ ದನಗಾಹಿಗಳಿಂದ ಮಾತ್ರ ಬಳಕೆಯಲ್ಲಿದ್ದ ಜಾಗ. ಚಾರ್ಲ್ಸ್ ಎಂಬ ದೊರೆ ಅವರನ್ನೆಲ್ಲ ಆ ಜಾಗದಿಂದ ಹೊರದಬ್ಬಿದ ಹಾಗೂ ಸುಮಾರು 2000 ಜಿಂಕೆಗಳನ್ನು ಆ ಜಾಗದಲ್ಲಿ ಬಿಟ್ಟು, ಅವು ಓಡಿಹೋಗದಂತೆ ಸುತ್ತಲೂ 8 ಮೈಲು ವ್ಯಾಪ್ತಿಗೆ ಗೋಡೆಗಳನ್ನು ಕಟ್ಟಿಸಿದ. ಆ ಜಾಗವನ್ನು ಆತ ತನ್ನ ವಿನೋದದ ಬೇಟೆಗೆ ಬಳಸತೊಡಗಿದ. 16ನೇ ಶತಮಾನದಲ್ಲಿ ಕಟ್ಟಿಸಿದ್ದ ಗೋಡೆಗಳ ತುಣುಕುಗಳನ್ನು ಇವತ್ತಿಗೂ ನೋಡಬಹುದು.

ದೊರೆಯ ವರ್ತನೆಯಿಂದ ಕುಪಿತರಾದ ಜನ ದಂಗೆಯೆದ್ದರು. ದೊರೆ ಹಕ್ಕು ಸಾಧಿಸಿದ ಜಾಗದ ಮೇಲೆ ಸಾರ್ವಜನಿಕರ ಹಕ್ಕೂ ಇದೆ ಎಂದು ದಾವೆಯನ್ನು ಹೂಡಿ ಗೆದ್ದರು. ಆ ಪ್ರದೇಶಕ್ಕೆ ತಮ್ಮ ಪ್ರವೇಶದ ಹಕ್ಕನ್ನು ಕಾದುಕೊಂಡರು. ದೊರೆ ಹಲವರಿಗೆ ಪರಿಹಾರಧನ ಕೊಡಬೇಕಾಯಿತು. ಅವನ ನಂತರದ 17ನೇ ಶತಮಾನದ ಎರಡನೇ ಚಾರ್ಲ್ಸ್ ಈ ಜಾಗದ ಮೇಲೆ ಹಣ ಸುರಿದು ಕೊಳ–ತೊರೆಗಳನ್ನು ನಿರ್ಮಿಸಿದ. 18ನೇ ಶತಮಾನದ ವೇಳೆಗೆ ಇದು ರಾಜಮನೆತನದ ಸಂಭಾಳಿಕೆಯಲ್ಲಿದ್ದ ಹೆಮ್ಮೆಯ ಜಾಗವಾಗಿ ಪರಿವರ್ತಿತವಾಯ್ತು.

ರಿಚ್ಮಂಡ್ ಪಾರ್ಕ್‌ನ ಸುತ್ತಲೂ ನಗರ ಬೆಳೆಯಿತಾದರೂ ಪಾರ್ಕನ್ನು ಬಹುತೇಕ ಹಾಗೆಯೇ ಉಳಿಸಿಕೊಂಡಿದ್ದಾರೆ. ಇಲ್ಲಿನ ಹೂ ಗಿಡ ಮರ ಬಳ್ಳಿಗಳು, ಕೊಳ, ತೊರೆ, ಜರಿಗಳು,